# ಕನಸಿನಲಿ ಅಲ್ಲಮ



ಒಂದು ದಿನ ಕನಸಿನಲಿ
ಅಲ್ಲಮ ಬಂದ
ತಲೆ ಸವರಿದ
ಶೂನ್ಯ ಪೀಠದಲಿ
ಮಂದಸ್ಮಿತನಾಗಿ ಕುಳಿತ

ಎದುರಿಗೆ ಬಸವಣ್ಣನ ನಾಯಕತ್ವದಲಿ
ನೆರೆದ ಗಣಂಗಳತ್ತ
ನಗೆ ಚಲ್ಲಿದ
ಒಬ್ಬೊಬ್ಬರೇ ಮಂಡಿಸಿದರು
ತಮ್ಮ ಅನುಭವದ, ಅಮೃತದ ವಿಚಾರ
ಗದ್ದಲವೇ ಇಲ್ಲ
ಇಲ್ಲವೇ ಇಲ್ಲ
ಕೂಗಾಟ – ಚೀರಾಟ
ಮೇಲೆ ಕೆಳಗೆ ತಳ್ಳಾಟ – ಗುದ್ದಾಟ

ಎಲ್ಲರಿಗೂ ಹೇಳಿದ ಬಸವ
ಇದುವೇ ಕಲ್ಯಾಣ ರಾಜ್ಯ
ಶೂನ್ಯ ಪೀಠವಾಯಿತು
ಶಾಂತ, ಜೀವಂತ

ಅಲ್ಲಮ ಪೀಠದಿಂದಿಳಿದ
ಮತ್ತೆ ನನ್ನತ್ತ ಸಾವರಿಸಿ ಬಂದ
ತಲೆ ಸವರಿದ, ಫಕ್ಕನೆ ಎಚ್ಚರ
ಅಲ್ಲಮ ಇಲ್ಲ, ಬಸವನೂ ಇಲ್ಲ

ಕೈಯಲ್ಲಿ ದಿನ ಪತ್ರಿಕೆ
ಗದ್ದಲ, ಗೊಂದಲ – ಮೈಕುಗಳ ಕಿತ್ತಾಟ
ಅನುಭವ ಮಂಟಪದೆದರು
ಕೂಗಾಟ – ಹಾರಾಟ
ಕುರ್ಚಿ ಎಸೆದಾಟ – ಕಾಗದಗಳ ತೂರಾಟ
ಅವನ ಕೈಯಲಿ ಇವನ ಕೊರಳ ಪಟ್ಟಿ
ಇವನ ಕೈಯಲಿ ಅವನ ಕೊರಳ ಪಟ್ಟಿ

ಮತ್ತೆ ಅಲ್ಲಮ
ಮೆಲ್ಲನೆ ನನ್ನ ಬಳಿ ಬಂದು
ಗುಟ್ಟಾಗಿ ಕಿವಿಯಲಿ ಉಸುರಿದ

ಇದು ಅಲ್ಲವೇ ಅಲ್ಲ
ಬಸವ ಜನಿಸಿದ ನಾಡು
ಇದು ನಿಮ್ಮ ನಿಮ್ಮ ಕಲ್ಯಾಣ ರಾಜ್ಯ
ಅನುಭವಿಸಿ ಇದು ನಿಮ್ಮ ಕರ್ಮ
ಈ ನೆಲದ, ನೆಲದ ಮಕ್ಕಳ ದೌರ್ಭಾಗ್ಯ

**● ಸತ್ಯಾನಂದ ಪಾತ್ರೋಟ**

ಕಲೆ: ಡಿ.ಕೆ. ರಮೇಶ್